ಒ.ಎಸ್. ನಂ. 117/2023
**ಪಿ.ಡಬ್ಲ್ಯು.–1**

**ದಿನಾಂಕ 17/07/2026 ರಂದು ಸಾಕ್ಷಿಯನ್ನು ಪುನಃ ಕರೆಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟಿ ಸವಾಲು – 1ನೇ ಪ್ರತಿವಾದಿ ಪರವಾಗಿ – ಶ್ರೀ ಎಂ.ಬಿ.ಎ. ವಕೀಲರಿಂದ**

**1ನೇ ಪ್ರತಿವಾದಿ ಮತ್ತು ಅವರ ಪರ ವಕೀಲರನ್ನು ಕೂಗಿಸಲಾಗಿ ಗೈರು ಹಾಜರಿದ್ದು, ಮುಂದುವರಿದ ಪಾಟಿ ಸವಾಲನ್ನು ಮುಂದೂಡಲು ಯಾವುದೇ ಸಕಾರಣವಿಲ್ಲ. ಆದ್ದರಿಂದ ಮುಂದುವರಿದ ಪಾಟಿ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**ಪಾಟಿ ಸವಾಲು – 2ನೇ ಪ್ರತಿವಾದಿ ಪರವಾಗಿ – ಶ್ರೀ ಆರ್.ಜೆ. ವಕೀಲರಿಂದ**

ನನಗೆ ಈಗ 60 ವರ್ಷ ವಯಸ್ಸು ಆಗಿರುತ್ತದೆ ಎಂದರೆ ಸರಿಯಲ್ಲ. 50 ರಿಂದ 53 ಆಸುಪಾಸು ವಯಸ್ಸು ಇರುತ್ತದೆ. 10ವರ್ಷಗಳ ಹಿಂದೆಯೇ ಈ ದಾವೆ ಸಲ್ಲಿಸಲು ನನಗೆ ತೊಂದರೆ ಇರಲಿಲ್ಲ ಎಂದರೆ ಸರಿಯಲ್ಲ. ಏಕೆಂದರೆ ನನ್ನ ತಂದೆ ಆಗ ಜೀವಂತ ಇದ್ದು, ಅವರು ನನ್ನನ್ನು ಭಾಗ ಕೇಳಲು ಬಿಡಲಿಲ್ಲ. ಪಾಡಿಗಟ್ಟೆ ಗ್ರಾಮದ ವರನಿಗೆ ನನ್ನನ್ನು ಮದುವೆ ಮಾಡಿಕೊಟ್ಟಿದ್ದು, ನನ್ನ ಗಂಡ ತೀರಿಕೊಂಡ ಕಾರಣ ನಾನು ತವರು ಮನೆಗೆ ವಾಸವಾಗಿದ್ದೆ ಎಂದರೆ ಸಾಕ್ಷಿ ದಾಂಪತ್ಯ ಜೀವನ ಸರಿಯಾಗಿರಲಿಲ್ಲ ಮತ್ತು ಇತರೆ ಬೇರೆ ಕಾರಣಗಳಿಂದ ಅವರೇ ನನ್ನನ್ನು ಮನೆಯಿಂದ ಆಚೆ ಕಳುಹಿಸಿದರು. ನನ್ನನ್ನು ನನ್ನ ತವರು ಮನೆಗೆ ಕರೆದುಕೊಂಡು ಬಂದ ನಂತರ ನನ್ನ ತಂದೆ ಮತ್ತು ನನ್ನ ಅಣ್ಣಂದಿರು ನನಗೆ ಪ್ರತ್ಯೇಕ ಮನೆಯನ್ನು ಕಟ್ಟಿಸಿ ಕೊಟ್ಟರು ಎಂದರೆ ಸರಿ. ಸಾಕ್ಷಿ ಮುಂದುವರಿದು ಮನೆಯನ್ನು ಕಟ್ಟಿಸಿಕೊಟ್ಟಿರುತ್ತಾರೆ ಅದೇ ರೀತಿ ನನ್ನ ಹೆಸರಿಗೆ ಜಮೀನನ್ನೂ ಸಹ ಖರೀದಿಸಿರುತ್ತಾರೆ. ಜೀವನೋಪಯಕ್ಕಾಗಿ ನನ್ನ ಸಹೋದರರು ಬಂಡವಾಳ ಹಾಕಿ ಅಂಗಡಿಯನ್ನು ತೆಗೆದುಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ನನ್ನ ತಂದೆ ಜೀವಂತವಿರುವಾಗಲೇ ಅಂಗಡಿ ಇತ್ತು, ಅದನ್ನು ಈಗ ಸಹೋದರರೇ ನಡೆಸಿಕೊಂಡು ಹೋಗುತ್ತಿರುತ್ತಾರೆ. ಈಗಲೂ ಆ ಅಂಗಡಿಯನ್ನು ನಾನೇ ನಡೆಸಿಕೊಂಡು ಜೀವನ ನಡೆಸುತ್ತೇನೆ ಎಂದರೆ ಸರಿಯಲ್ಲ.

ನನ್ನ ತಂದೆ ಜೀವಂತವಿರುವಾಗಲೇ ನನಗೆ ಮನೆ ಕಟ್ಟಿಸಿ, ಅಂಗಡಿ ಇಟ್ಟುಕೊಟ್ಟು, ನನ್ನ ಸಹೋದರರಿಗೆ ಜಮೀನು ಮಾಡಿಕೊಂಡು ಹೋಗುವಂತೆ ಹೇಳಿದ್ದರು ಎಂದರೆ ಸರಿಯಲ್ಲ. ಈ ದಾವೆಯಲ್ಲಿ ನನ್ನ ಹೆಸರಿಗೆ ಇರುವ ನನ್ನ ತಂದೆ ಖರೀದಿಸಿದ್ದ ಜಮೀನನ್ನು ಸೇರಿಸಿರುತ್ತೇನೆ. ಸದರಿ ಜಮೀನಿನ ಸರ್ವೆ ನಂ.19/1ಎ ಇದ್ದು, ಅದರ ವಿಸ್ತೀರ್ಣ 1 ಎಕರೆ

8 ಗುಂಟೆ ಇರುತ್ತದೆ. ಇನ್ನೊಂದು ಜಮೀನು 2 ಎಕರೆ 11 ಗುಂಟೆ ಇದ್ದು, ಅದನ್ನು ಈ ದಾವೆಯಲ್ಲಿ ಸೇರಿಸಿದ್ದೇನೆ, ಅದರ ಸರ್ವೆ ನಂಬರು ನನಗೆ ಗೊತ್ತಿಲ್ಲ. ಸದರಿ ಜಮೀನು ನನ್ನ ತಂದೆಯ ಹೆಸರಿಗೆ ಇರುತ್ತದೆ.

ನನ್ನ ಹೆಸರಿಗೆ ನನ್ನ ತಂದೆ ಜಮೀನನ್ನು ಖರೀದಿಸಿದ್ದರು ಮತ್ತು ಸದರಿ ಜಮೀನನ್ನು ಈ ದಾವೆಯಲ್ಲಿ ಸೇರಿಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಈ ದಾವೆಯಲ್ಲಿ ಸರ್ವೆ ನಂ.1/8 ಅನ್ನು ನನ್ನ ತಂದೆ ಜೀವಂತವಿರುವಾಗಲೇ ನನ್ನ ಅಣ್ಣಂದಿರ ಹೆಸರಿಗೆ ನನ್ನ ತಂದೆ ಖಾತೆ ಮಾಡಿಸಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಈ ದಾವಾ ಆಸ್ತಿ ನನ್ನ ತಂದೆಗೆ ದರಖಾಸ್ತು ಮೂಲಕ ಬಂದಿದ್ದು, ಸ್ವಯಾರ್ಜಿತ ಆಸ್ತಿ ಇದ್ದು, ಅದನ್ನು ನನ್ನ ಸಹೋದರರಿಗೆ ಬರೆದುಕೊಟ್ಟಿದ್ದರು ಎಂದರೆ ಸರಿಯಲ್ಲ. ನನ್ನ ತಂದೆ ನನಗೆ ಮತ್ತು ನನ್ನ ಸಹೋದರರಿಗೆ ಸಮವಾಗಿ ಆಸ್ತಿಯನ್ನು ಹಂಚಿ ಕೊಡುತ್ತೇನೆ ಎಂದು ಸ್ವತಃ ನುಡಿದಿರುತ್ತಾರೆ. ಈ ಬಗ್ಗೆ ನನ್ನ ತಂದೆ ಯಾವುದೇ ದಾಖಲೆಯನ್ನು ಬರೆದುಕೊಟ್ಟಿಲ್ಲ ಎಂದರೆ ಸರಿ. ಆ ಬಗ್ಗೆ ದಾಖಲೆ ಮಾಡಿಕೊಡುವಂತೆ ಕೇಳಲು ನನಗೆ ಯಾವುದೇ ತೊಂದರೆ ಇರಲಿಲ್ಲ. ನನ್ನ ತಂದೆ ನನ್ನ ಸಹೋದರರಿಗೆ ಜಮೀನು ಕೊಟ್ಟು, ನನಗೆ ಅಂಗಡಿ ಮತ್ತು ಮನೆ ಕಟ್ಟಿಸಿಕೊಟ್ಟಿರುವುದರಿಂದ ನನಗೆ ಜಮೀನು ಕೊಡುವುದಿಲ್ಲ ಎಂದು ನನ್ನ ತಂದೆ ನನಗೆ ತಿಳಿಸಿದ್ದರು ಎಂದರೆ ಸರಿಯಲ್ಲ.

ಈ ದಾವೆಯನ್ನು ನಾನು ಮತ್ತು ನನ್ನ ತಂಗಿ ಮಾಡಿರುತ್ತೇವೆ. ನನ್ನ ತಂಗಿ ನ್ಯಾಯಾಲಯದ ಮುಂದೆ ಬಂದು ಸಾಕ್ಷ್ಯ ನುಡಿಯಲು ಯಾವುದೇ ತೊಂದರೆ ಇಲ್ಲ ಎಂದರೆ ಸರಿ.

ನನ್ನ ಹಾಗೂ ಪ್ರತಿವಾದಿ ನಂ.1 ಮತ್ತು 2 ರವರ ನಡುವೆ ಬಹಳ ವರ್ಷಗಳಿಂದ ಒಳ್ಳೆಯ ಸಂಬಂಧ ಇದ್ದು, ನಾವೆಲ್ಲರೂ ಅನ್ಯೋನ್ಯವಾಗಿ ಇದ್ದೇವೆ ಎಂದರೆ ಸರಿಯಲ್ಲ. ನಾನು ಮತ್ತು 1ನೇ ಪ್ರತಿವಾದಿ ಇತ್ತೀಚೆಗೆ ಬಹಳ ಅನ್ಯೋನ್ಯವಾಗಿ ಇದ್ದೇವೆ ಮತ್ತು 2ನೇ ಪ್ರತಿವಾದಿಯ ಜೊತೆಗೆ ಅನ್ಯೋನ್ಯವಾಗಿ ಇಲ್ಲ ಎಂದರೆ ಸರಿಯಲ್ಲ.

ದಾವಾ ಆಸ್ತಿಗಳನ್ನು ನನ್ನ ಸಹೋದರರು ಅವರ ಹೆಸರಿಗೆ ಖಾತೆ ಬಂದ ನಂತರ ಅವರೇ ಸ್ವಾಧೀನದಲ್ಲಿದ್ದು 10 ರಿಂದ 15 ಲಕ್ಷ ಖರ್ಚು ಮಾಡಿ ಸಮತಟ್ಟು ಮಾಡಿಕೊಂಡು ಉಳುಮೆ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಬೋರ್ ವೆಲ್ ಕೊರೆಸಿ ಅಡಿಕೆ ತೋಟ

ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ನಾನು ಬೇಡ ಎಂದು ಹೇಳಿದ್ದು, ಅವರು ಖರ್ಚು ಮಾಡಿ ತೋಟ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ತಂದೆ ತೀರಿಕೊಂಡ ನಂತರ ಜಮೀನುಗಳಲ್ಲಿ ನಾನು ಉಳುಮೆ ಮಾಡಬಹುದಿತ್ತು, ಆದರೆ ನನ್ನ ಸಹೋದರರು ಅದಕ್ಕೆ ಅಡ್ಡಿಪಡಿಸಿರುತ್ತಾರೆ, ಆದ್ದರಿಂದ ನಾನು ಉಳುಮೆ ಮಾಡಲಾಗಲಿಲ್ಲ. ಆ ಕಾಲಕ್ಕೆ ಈ ಬಗ್ಗೆ ಪೊಲೀಸರಿಗೆ ನಾನು ದೂರು ಕೊಟ್ಟಿರುತ್ತೇನೆ.

ನನ್ನ ಸಹೋದರರು ಹೊಲವನ್ನು ಸಮತಟ್ಟು ಮಾಡಿ ತೋಟ ಮಾಡಿದ ನಂತರ ನನಗೆ ದಾವಾ ಆಸ್ತಿಯ ಮೇಲೆ ನನಗೆ ಆಸೆ ಉಂಟಾಗಿ ಈ ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. 2ನೇ ಪ್ರತಿವಾದಿಯ ಹೆಂಡತಿಗೂ ಮತ್ತು ನನಗೂ ಇತ್ತೀಚೆಗೆ ಚಿಕ್ಕ ವಿಚಾರಕ್ಕೆ ಗಲಾಟೆ ಆಗಿದ್ದರಿಂದ ನಾನು ಈ ದಾವೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಈ ದಾವಾ ಆಸ್ತಿಗಳಲ್ಲಿ ಯಾವುದೇ ಹಕ್ಕು ಅಧಿಕಾರ ಇಲ್ಲದೇ ಇದ್ದರೂ ಸಹ ನಾನು ಸುಳ್ಳು ದಾವೆ ಸಲ್ಲಿಸಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ತಂದೆ 2011 ರಲ್ಲಿ ಮೃತಪಟ್ಟಿರುತ್ತಾರೆ. 2012 ರಲ್ಲಿ ನಾನು ದಾವೆ ಮಾಡಲು ನನಗೆ ಯಾವುದೆ ತೊಂದರೆ ಇರಲಿಲ್ಲ ಎಂದರೆ ನಾನು 2012 ರಲ್ಲಿ ದಾವೆ ಹಾಕಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ದಾಖಲೆಗಳನ್ನು ಈ ದಾವೆಯಲ್ಲಿ ಹಾಜರುಪಡಿಸಿರುತ್ತೇನೆ. ಈ ಮಾತು ಸುಳ್ಳು ಎಂದರೆ ಸರಿಯಲ್ಲ. 2011-12 ರಲ್ಲಿ ನನ್ನ ಸಹೋದರರ ಹೆಸರಿನಲ್ಲಿ ಖಾತೆ ಬದಲಾವಣೆ ಆದ ಸಂದರ್ಭದಲ್ಲಿ ನಾನು ಖಾತೆ ಬದಲಾವಣೆ ಮಾಡಬೇಡಿ ಎಂದು ತಕರಾರು ಸಲ್ಲಿಸಬಹುದಿತ್ತು ಎಂದರೆ ಸಾಕ್ಷಿ ನನಗೆ ಆ ಬಗ್ಗೆ ಗೊತ್ತಿರಲಿಲ್ಲ, ಆದ್ದರಿಂದ ತಕರಾರು ಸಲ್ಲಿಸಿಲ್ಲ ಎಂದು ನುಡಿಯುತ್ತಾರೆ.

ಊರಿನಲ್ಲಿ ಪಾಲು ವಿಭಾಗದ ಬಗ್ಗೆ ಪಂಚಾಯಿತಿ ಮಾಡಿದ ಕಾಲಕ್ಕೆ ಟಿ.ಕೆ. ರಂಗನಾಥಸ್ವಾಮಿ, ಬಸಣ್ಣ, ಸಿದ್ದಲಿಂಗಣ್ಣ, ಹಾಗೆ ಇತರರು ಬಹಳ ಜನ ಇದ್ದರು. ಊರಿನಲ್ಲಿ ಈ ರೀತಿ ಯಾವುದೇ ಪಂಚಾಯಿತಿ ಮಾಡಿಲ್ಲ, ಆ ಬಗ್ಗೆ ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪಂಚಾಯಿತಿ ಮಾಡಿದವರನ್ನು ನ್ಯಾಯಾಲಯದಲ್ಲಿ ಸಾಕ್ಷ್ಯ ಮಾಡಿಸಲು ಯಾವುದೇ ತೊಂದರೆ ಇಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಿ ತಿಳಿಸಿದ ಸಂಗತಿಗಳೆಲ್ಲ ಸುಳ್ಳಿನಿಂದ ಕೂಡಿವೆ ಎಂದರೆ ಸರಿಯಲ್ಲ.

ಒ.ಎಸ್. ನಂ. 117/2023

**ಪಿ.ಡಬ್ಲ್ಯು.-1**

**ಮರು ವಿಚಾರಣೆ - ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಇದೆ.

**ಪ್ರಧಾನ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ.**